# JANUARY 08, 2026

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಖ್ಯಾತ ಪರಿಸರ ತಜ್ಞ, ಪ್ರೊಫೆಸರ್ ಮಾಧವ ಧನಂಜಯ ಗಾಡ್ಗೀಳ್, ಅಲ್ಪಕಾಲದ ಅನಾರೋಗ್ಯದಿಂದ, ಪುಣೆಯ ಖಾಸಗಿ ಆಸ್ಪತ್ರೆಯಲ್ಲಿ ನಿನ್ನೆ ರಾತ್ರಿ ನಿಧನರಾಗಿದ್ದಾರೆ. ಅವರಿಗೆ 83 ವರ್ಷ ವಯಸ್ಸಾಗಿತ್ತು. ಪ್ರೊಫೆಸರ್ ಗಾಡ್ಗೀಳ್ ಅವರ ಪಾರ್ಥೀವ ಶರೀರವನ್ನು, ಪುಣೆಯ ಪಂಚವಟಿಯ, ಎ.ಎ.–18 ಸ್ಪ್ರಿಂಗ್ ಫ್ಲಾವರ್ ಅಪಾರ್ಟ್‌ಮೆಂಟ್‌ನ, ಸ್ವಗೃಹದಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕೆ, ವ್ಯವಸ್ಥೆ ಮಾಡಲಾಗಿದೆ. ಇಂದು ಸಂಜೆ 4 ಗಂಟೆಗೆ, ವೈಕುಂಠದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು, ಅವರ ಸುಪುತ್ರ, ಸಿದ್ಧಾರ್ಥ ಗಾಡ್ಗೀಳ ತಿಳಿಸಿದ್ದಾರೆ. ಪಶ್ಚಿಮ ಘಟ್ಟಗಳ ಪರಿಸರ ವಿಜ್ಞಾನ ತಜ್ಞರ, ಸಮಿತಿಯ ಅಧ್ಯಕ್ಷರಾಗಿದ್ದ ಅವರು, ರಾಜ್ಯದ ಕರಾವಳಿ ಜಿಲ್ಲೆಗಳ ಉದ್ದಗಲಕ್ಕೂ ಸಂಚರಿಸಿ, ಪಶ್ಚಿಮಘಟ್ಟದ ಬಹುಚರ್ಚಿತ ವರದಿ ಸಿದ್ಧಪಡಿಸಿದ್ದರು. ಪದ್ಮವಿಭೂಷಣ ಹಾಗೂ ಚಾಂಪಿಯನ್ಸ್ ಆಫ್ ದಿ ಅರ್ಥ್ ಪ್ರಶಸ್ತಿಗೆ ಭಾಜನರಾಗಿದ್ದರು. ಬೆಂಗಳೂರಿನ, ಭಾರತೀಯ ವಿಜ್ಞಾನ ಸಂಸ್ಥೆಯ, ಸಂಶೋಧನಾ ವೇದಿಕೆ, ಸೆಂಟರ್ ಫಾರ್ ಇಕಲಾಜಿಕಲ್ ಸೈನ್ಸಸ್‌ನ ಸ್ಥಾಪಕರು. ಅನೇಕ ಗಣ್ಯರು ಪ್ರೊಫೆಸರ್ ಮಾಧವ ಗಾಡ್ಗೀಳ ನಿಧನಕ್ಕೆ, ಕಂಬನಿ ಮಿಡಿದಿದ್ದಾರೆ.

<><><>

ರಾಷ್ಟ್ರೀಯ ಪಕ್ಷಿಗಳ ದಿನಾಚರಣೆ ಅಂಗವಾಗಿ, ಶತಮಾನ ಕಂಡ, ಧಾರವಾಡದ ಕೆಲಗೇರಿ ಕೆರೆ ಆವಾರದಲ್ಲಿ, 'ಪಕ್ಷಿಗಳನ್ನು ರಕ್ಷಿಸೋಣ; ಪರಿಸರವನ್ನು ಸಂರಕ್ಷಿಸೋಣ' ಧ್ಯೇಯದೊಂದಿಗೆ, ಕೊಳದ ವಲಸೆ ಹಕ್ಕಿಗಳ ವೀಕ್ಷಣೆ, 'ವೇಡರ್ಸ್ ವಾಚ್' ಮತ್ತು ದಾಖಲೀಕರಣವನ್ನು, ಜನ ವಿಜ್ಞಾನಿಗಳು ಕೈಗೊಂಡರು. ನೇಚರ್ ರಿಸರ್ಚ್ ಸೆಂಟರ್, ಧಾರವಾಡ, ನೇಚರ್ ಫಸ್ಟ್ ಇಕೋ ವಿಲೇಜ್, ಹಳ್ಳಿಗೇರಿ ಹಾಗೂ ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸಾಯಿಟಿ, ಮುಂಬೈ ಸಹಯೋಗದಲ್ಲಿ, ಚಳಿಗಾಲದ ವಲಸೆ ಹಕ್ಕಿಗಳ ವೀಕ್ಷಣೆಯನ್ನು, 38 ಜನ ಪರಿಸರಾಸಕ್ತರ ತಂಡ, ಪಕ್ಷಿ ಶಾಸ್ತ್ರಜ್ಞರ ಮಾರ್ಗದರ್ಶನದಲ್ಲಿ ಕೈಗೊಂಡು, 48 ಪ್ರಜಾತಿಗೆ ಸೇರಿದ, 156 ಪಕ್ಷಿಗಳನ್ನು ವೀಕ್ಷಿಸಿ, ದಾಖಲಿಸಿತು.

<><><>

ಉತ್ತರಕನ್ನಡ ಜಿಲ್ಲೆ, ಅಂಕೋಲಾ ತಾಲೂಕು, ಬಾವಿಕೇರಿಯ ಬೆಲ್ಜಿಯಂ ಮೆಲಿನಾಯ್ಸ್ ತಳಿಯ, 9 ಶ್ವಾನ ಮರಿಗಳು, ಕೇಂದ್ರ ಮೀಸಲು ಪಡೆ ಹಾಗೂ ಪಶ್ಚಿಮ ಬಂಗಾಳದ ಪೊಲೀಸ್ ಇಲಾಖೆ ಸೇವೆಗೆ, ಆಯ್ಕೆಯಾಗಿವೆ. ಬಾವಿಕೇರಿಯ ರಾಘವೇಂದ್ರ ಭಟ್ ಅವರು, ಈಗಾಗಲೇ 40ಕ್ಕೂ ಹೆಚ್ಚು ವಿಶಿಷ್ಟ ತಳಿಯ ಶ್ವಾನಗಳನ್ನು, ರಕ್ಷಣಾ ಪಡೆಗಳಿಗೆ ನೀಡಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ರಾಘವೇಂದ್ರ ಭಟ್ ಧ್ವನಿ 30 ಸೆಕೆಂದುಗಳು

<><><>

ಆಕಾಶವಾಣಿಯ ಧಾರವಾಡ ಕೇಂದ್ರ, 'ಬಹುಜನ ಹಿತಾಯ, ಬಹುಜನ ಸುಖಾಯ' ಧ್ಯೇಯದೊಂದಿಗೆ ಕಾರ್ಯಾರಂಭಿಸಿ, ಇಂದಿಗೆ 76 ವರ್ಷಗಳು ಪೂರ್ಣಗೊಂಡವು. ರಂಗನಾಥ ದಿವಾಕರ ಅವರು, ಕೇಂದ್ರದ ಪ್ರಸಾರ ಖಾತೆ ಸಚಿವರಾಗಿದ್ದ ಸಂದರ್ಭದಲ್ಲಿ, ಜನವರಿ 8, 1950 ರಲ್ಲಿ, ಕಾರ್ಯಾರಂಭಿಸಿದ, ಧಾರವಾಡ ಆಕಾಶವಾಣಿ ಕೇಂದ್ರ, ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕ ಭಾಗದ, ಸಾಹಿತ್ಯ, ಸಂಸ್ಕೃತಿ, ಜಾನಪದ, ಸಂಗೀತ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ, ಶ್ರೀ ಸಾಮಾನ್ಯನ ವಿಶ್ವವಿದ್ಯಾಲಯವಾಗಿ, ಕೇಳಿಸಿಕೊಳ್ಳುವ ವಿವೇಕ ಸಂಸ್ಕೃತಿಯನ್ನು, ಬೆಳೆಸುವಲ್ಲಿ ಹಾಗೂ ದಾಖಲಿಸುವಲ್ಲಿ, ಮಹತ್ವದ ಪಾತ್ರ ವಹಿಸಿದೆ.

<><><>

ಕೃಷಿ ಕ್ಷೇತ್ರದಲ್ಲಿ ಅನೇಕ ಸವಾಲುಗಳಿದ್ದು, ಕೃಷಿ ನವೋದ್ಯಮಗಳು ಸಕಾಲಿಕ ಪರಿಹಾರ ಸೂಚಿಸಬಲ್ಲವು ಎಂದು, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿ, ಪಿ.ಎಲ್. ಪಾಟೀಲ ಹೇಳಿದ್ದಾರೆ. ಕೃಷಿ ಉದ್ಯಮಶೀಲತೆ ಯೋಜನೆ ಅಡಿ, ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಆಯೋಜಿತ, ತರಬೇತಿ ಕಾರ್ಯಾಗಾರ ಉದ್ಘಾಟಿಸಿ, ಅವರು ಮಾತನಾಡಿದರು. ಕೃಷಿಕ್ ನವೋದ್ಯಮ ಪೋಷಣ ಕೇಂದ್ರದಿಂದ, 11 ತಂಡಗಳಲ್ಲಿ, 300ಕ್ಕೂ ಹೆಚ್ಚು ಸ್ಟಾರ್ಟ್ ಅಪ್‌ಗಳಿಗೆ ತರಬೇತಿ ನೀಡಲಾಗಿದೆ. 139 ನವೋದ್ಯಮಿಗಳು ಸಕ್ರಿಯರಾಗಿದ್ದು, 14 ಕೋಟಿ 50 ಲಕ್ಷ ರೂಪಾಯಿ ಅನುದಾನಕ್ಕೆ ಶಿಫಾರಸು ಮಾಡಲಾಗಿದೆ. 40ಕ್ಕೂ ಹೆಚ್ಚು ಪೇಟೆಂಟ್‌ಗಳಿಗೆ ನವೋದ್ಯಮಿಗಳು, ಅರ್ಜಿ ಸಲ್ಲಿಸಿದ್ದಾರೆ ಎಂದರು.

<><><>

ಧಾರವಾಡ ಜಿಲ್ಲೆ, ನವಲಗುಂದದ ಮಾಡೆಲ್ ಹೈಸ್ಕೂಲ್ ಕ್ರೀಡಾಂಗಣದಲ್ಲಿ, ಇಂದು ಮತ್ತು ನಾಳೆ, ಸಂಸದರ ಕ್ರೀಡಾ ಮಹೋತ್ಸವ ಜರುಗಲಿದ್ದು, ವಿಧಾನ ಪರಿಷತ್ ಸಭಾಪತಿ, ಬಸವರಾಜ ಹೊರಟ್ಟಿ ಚಾಲನೆ ನೀಡಲಿದ್ದಾರೆ.

ನವಲಗುಂದ ಮಂಡಳದ ಬಿಜೆಪಿ ಅಧ್ಯಕ್ಷ, ಗಂಗಪ್ಪ ಮನಮಿ ತಿಳಿಸಿದ್ದಾರೆ. ಯುವಜನತೆಯಲ್ಲಿ ಕ್ರೀಡೆ, ಸಾಂಸ್ಕೃತಿಕ ನಾಯಕತ್ವ ಉತ್ತೇಜಿಸಲು, ಧಾರವಾಡ ಲೋಕಸಭಾ ಕ್ಷೇತ್ರ ವ್ಯಾಪ್ತಿಯ, ನವಲಗುಂದ ವಿಧಾನಸಭಾ ಕ್ಷೇತ್ರದಲ್ಲಿ, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಸಂಸದ್ ಖೇಲ್ ಮಹೋತ್ಸವ ಆಯೋಜಿಸಿದ್ದಾರೆ, ಎಂದರು. 590ಕ್ಕೂ ಹೆಚ್ಚು ತಂಡಗಳು ಹೆಸರು ನೋಂದಾಯಿಸಿವೆ.

<><><>

ಬೆಳಗಾವಿಯ, ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಸ್ವಾಯತ್ತ ಮಹಾವಿದ್ಯಾಲಯದ, ಬಿ.ಕಾಂ. ಅಂತಿಮ ವರ್ಷದ ವಿದ್ಯಾರ್ಥಿ, ಎನ್.ಸಿ.ಸಿ. ಕೆಡೆಟ್ ಧೀರಜ ಭಾವಿಮನೆ, ಈ ತಿಂಗಳ 26 ರಂದು, ಹೊಸ ದಿಲ್ಲಿಯ ಕರ್ತವ್ಯ ಪಥದಲ್ಲಿ ಜರುಗುವ, ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ, ಕರ್ನಾಟಕ ಮತ್ತು ಗೋವಾ ಎನ್.ಸಿ.ಸಿ. ನಿರ್ದೇಶನಾಲಯವನ್ನು ಧೀರಜ ಪ್ರತಿನಿಧಿಸಲಿದ್ದಾರೆ. 26 ಕರ್ನಾಟಕ ಎನ್.ಸಿ.ಸಿ. ಬಟಾಲಿಯನ್, ಕಮಾಂಡಿಂಗ್ ಆಫೀಸರ್, ಕರ್ನಲ್ ಸುನೀಲ ದಾಗರ, ಅಭಿನಂದಿಸಿದ್ದಾರೆ.

<><><>

ಟ್ರ್ಯಾಕ್ ಸೈಕ್ಲಿಂಗ್ ಅಭ್ಯಾಸ ಹಾಗೂ ರಾಷ್ಟ್ರೀಯ ಚಾಂಪಿಯನ್‌ಶಿಪ್ ಆಯೋಜನೆಗೆ ಬೇಕಾದ, ವೆಲೋಡ್ರೋಮ್‌ನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ನಾಳೆ ವಿಜಯಪುರದಲ್ಲಿ ಉದ್ಘಾಟಿಸಲಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದ ವಿಜಯಪುರದ ಸೈಕ್ಲಿಸ್ಟ್‌ಗಳು, ವಿಶ್ವ ಗುಣಮಟ್ಟದ ವೆಲೋಡ್ರೋಮ್‌ಗಾಗಿ, ಚೆನ್ನೈ ಅಥವಾ ಹೈದ್ರಾಬಾದ್ ಆಶ್ರಯಿಸಿ, ತರಬೇತಿ ಹಾಗೂ ಪೂರ್ವಸಿದ್ಧತೆ ಕೈಗೊಳ್ಳುವ ಅನಿವಾರ್ಯತೆ ಇತ್ತು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.